**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ 46/2015**

(ಪ್ರಾ.ಸಾ. 6 ಚಾಸಾ- 5 )

ತಾಃ 24-01-2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಚಂದ್ರಶೇಖರಯ್ಯ |
| ತಂದೆಯ ಹೆಸರು | ಃ | ಪೋಲೀಸ್ ಮಾರಪ್ಪ |
| ವಯಸ್ಸು | ಃ | 59 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ದೊಡ್ಡಬೆಳವಂಗಲ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಸುಮಾರು 4 ವರ್ಷಗಳ ಹಿಂದೆ ಪೋಲೀಸ್ ಠಾಣೆಗೆ ಮುಂಭಾಗ ಹೋಗುತ್ತಿದ್ದಾಗ ಒಂದು ದಾಖಲೆಗೆ ಸಹಿ ಮಾಡಲು ಹೇಳಿದ್ದರು. ಕಾರಣ ನಾನು ಸಹಿ ಮಾಡಿದ್ದೇನೆ. ದಿನಾಂಕ 24.02.14 ರ ಮಹಜರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಮಹಜರನ್ನು ನಿಪಿ 9 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು. (ನಿಪಿ 9ರ ಮೂಲ ದಾಖಲೆ ದೊಡ್ಡಬಳ್ಳಾಪುರ ನ್ಯಾಯಾಲಯದ ಕ್ರೈಂ ನಂಬರ್ 44/14 ರಲ್ಲಿ ಹಾಜರುಪಡಿಸಲಾಗಿದೆ ಎಂದು ಮಾನ್ಯ ಪಿ.ಪಿ ಯವರು ಹೇಳುತ್ತಾರೆ) ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ. ಈ ಕೇಸಿನ 2ನೇ ಆರೋಪಿ

ಕೃಷ್ಣನನ್ನು ನಾನು ನೋಡಿಲ್ಲ. ನಿಪಿ 9 ಮಹಜರಿನಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪರಿಶೀಲಿಸಲಾಯಿತು. ಸಕಾರಣಗಳು ಇರುವುದರಿಂದ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕ 24-02-2014 ರಂದು ದೊಡ್ಡಬೆಳವಂಗಲ ಪೋಲೀಸ್ ಠಾಣೆಗೆ ನನ್ನನ್ನು ಕರೆಸಿದ ಸಂದರ್ಭದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಕೃಷ್ಣ ಈತನನ್ನು ಪೋಲೀಸರು ನನಗೆ ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿ ಬಳಿ ಇದ್ದ ಕೆಎ 05 3975 ಬಜಾಜ್ ಚೇತಕ್ ಸ್ಕೂಟರ್‌ನ್ನು, ವೀಲ್ ಸ್ಪಾನ್ , ಒಂದು ಚಾಕು , ಎರಡು ಕಬ್ಬಿಣದ ರಾಡುಗಳನ್ನು ನನ್ನ ಸಮಕ್ಷಮ ಪೋಲೀಸರು ಮಹಜರಿನಡಿ ಜಪ್ತು ಮಾಡಿದರು ಎಂದರೆ ಸರಿಯಲ್ಲ. ನಿಪಿ 9 ಮಹಜನರನ್ನು ಓದಿ ತಿಳಿದು ಸಹಿ ಮಾಡಿದ್ದರೂ ಹಾಗೂ ಆರೋಪಿ ಕೃಷ್ಣನನ್ನು ನೋಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಎಲ್ಲಾ ಆರೋಪಿತರ ಪರವಾಗಿ ಃ**

ಪಾಟೀ ಸವಾಲು ಇಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.